# ಲಕ್ಕಿ ಬ್ಯಾಂಬೂ!

## ಬಿದಿರಿನ ತದ್ರೂಪಿಯಿಂದ ಮೆರುಗು

ಅದೃಷ್ಟದ ಸಂಕೇತವಾಗಿ ಹೆಚ್ಚು ಪ್ರಚಲಿತವಾದ ಲಕ್ಕಿ ಬ್ಯಾಂಬೂ ಸಸ್ಯಗಳು ಬಹುತೇಕರ ಮನೆಗಳಲ್ಲಿ ಜಾಗ ಪಡೆದುಕೊಂಡಿವೆ. ತಂಪು ನೆರಳನ್ನೂ, ಹದವಾದ ಬಿಸಿಲನ್ನೂ ಸಾವರಿಸಿಕೊಳ್ಳುವ, ನೀರು–ಮಣ್ಣು ಎರಡನ್ನೂ ಅಪ್ಪಿ ಸುಲಭವಾಗಿ ಬೆಳೆಯುವ ಈ ಗಿಡ ಒಳಾಂಗಣದ ವಿನ್ಯಾಸಕ್ಕೆ ಮೆರುಗು ನೀಡುತ್ತದೆ.

■ ಸೀಮಾ ಹೆಗಡೆ

‘ಡ್ರೆಸಿನಾ ಸಾಂಡೇರಿಯಾನಾ’ – ಹೀಗೆಂದಾಗ, ಮನಸ್ಸು ಒಮ್ಮೆಲೆ ಚಲಿಸುವುದು ಸಸ್ಯಶಾಸ್ತ್ರೀಯ ಹೆಸರುಗಳನ್ನು ಕಷ್ಟಪಟ್ಟು ಉರುಹೊಡೆಯುತ್ತಿದ್ದ ಕಾಲೇಜಿನ ಜೀವಶಾಸ್ತ್ರದ ತರಗತಿಗೆ. ಚಿರಪರಿಚಿತವಾದ ಈ ಸಸ್ಯವನ್ನು ನಾವೆಲ್ಲರೂ ನೋಡಿರುತ್ತೇವೆ. ಈಗೊಂದು ದಶಕದ ಹಿಂದಂತೂ ಪ್ರತಿ ಕಚೇರಿ, ಮನೆಗಳಲ್ಲಿ ಅದೃಷ್ಟದ ಸಂಕೇತವಾಗಿ ಈ ಸಸ್ಯ ನೆಲೆಸಿತ್ತು. ಈಗಲೂ ಒಳಾಂಗಣ ಸಸ್ಯಪ್ರೇಮಿಗಳ ನಂಬರ್ 1 ಆಯ್ಕೆಯಿದು. ಒಳಾಂಗಣದ ನೆರಳನ್ನು ಪ್ರೀತಿಸುವ ಈ ಸಸ್ಯದ ಹೆಸರು ಲಕ್ಕಿ ಬ್ಯಾಂಬೂ.

ಲಕ್ಕಿ ಬ್ಯಾಂಬೂ ಬಿದಿರಲ್ಲ. ಬಿದಿರಿಗೂ ಇದಕ್ಕೂ ಕೌಟುಂಬಿಕವಾಗಿ ತೀರಾ ದೂರದ ಸಂಬಂಧ. ಆದರೆ ನಿಜಕ್ಕೂ ಲಕ್ಕಿ ಬ್ಯಾಂಬೂಗಳು ಸೇರುವುದು ‘ಡ್ರೆಸಿನಾ’ಗಳ ಕುಟುಂಬಕ್ಕೆ. ಬಿದಿರು ಮತ್ತು ಡ್ರೆಸಿನಾಗಳು ಏಕದಳ ಸಸ್ಯಗಳೆಂಬುದೊಂದೇ ಎರಡರ ನಡುವಿನ ಸಾಮ್ಯತೆ.

ಸಾಂಡರ್ ಎಂಬ ವಿಜ್ಞಾನಿಯ ಕೊಡುಗೆಯಿಂದ ‘ಸಾಂಡೇರಿಯಾನಾ’ ಆದ ಈ ಡ್ರೆಸಿನಾ, ಚೀನಾದ ‘ಫೆಂಗ್‌ಶೂಯಿ’ ಸಂಪ್ರದಾಯದ ಪ್ರಕಾರ ‘ಲಕ್ಕಿ’ಯೆಂದು ಗುರ್ತಿಸಿಕೊಂಡಿದೆ. ಬಿದಿರನ್ನೇ ಹೋಲುವ ಕಾರಣ ‘ಬ್ಯಾಂಬೂ’ ಎನಿಸಿಕೊಂಡಿದೆ. ಆಫ್ರಿಕಾದಲ್ಲಿ ಹುಟ್ಟಿದ್ದರೂ ಗಾಳಿ ಶುದ್ಧೀಕರಿಸುವ, ಸಂಪತ್ತನ್ನು ಆಹ್ವಾನಿಸುವ ವಾಸ್ತು ಗಿಡ ಎಂಬ ಮಾರುಕಟ್ಟೆ ತಂತ್ರದೊಡನೆ ಭಾರತಕ್ಕೂ ಪರಿಚಯಗೊಂಡಿದೆ. ಬಣ್ಣದ ಕಲ್ಲುಗಳಿಂದ ತುಂಬಿದ ಗಾಜಿನ ಬಟ್ಟಲಿನಲ್ಲಿ ಚಿಕ್ಕ ದಂಟುಗಳನ್ನು ಸೇರಿಸಿ ಕೆಂಪು ರಿಬ್ಬನ್ ಕಟ್ಟಿ ನೀರಿನಲ್ಲಿರಿಸಿದ ಲಕ್ಕಿ ಬ್ಯಾಂಬೂಗಳು ಗಿಫ್ಟ್ ಶಾಪ್‌ನಲ್ಲಿ ದೊರೆಯುತ್ತವೆ. ಸೌಭಾಗ್ಯ, ಸಂತೋಷ ಬರಮಾಡಿಕೊಳ್ಳಬಹುದೆಂಬ ಆಸೆಯಿಂದ ಮನೆ, ಅಂಗಡಿ–ಕಚೇರಿಗಳಲ್ಲೂ ಇವು ಪ್ರಸಿದ್ಧ. ಏನೇ ಆಗಲಿ ಮನೆಯಲ್ಲೊಂದು ಸಸ್ಯ ಒಳ್ಳೆಯದೇ ಅಲ್ಲವೇ!

ಲಕ್ಕಿ ಬ್ಯಾಂಬೂ ಜೊತೆಗೆ ಇದೇ ಕುಟುಂಬದ ‘ಲೋಟಸ್ ಬ್ಯಾಂಬೂ’, ‘ಸಾಂಗ್ ಆಫ್ ಇಂಡಿಯಾ’, ‘ಸ್ನೇಕ್ ಪ್ಲಾಂಟ್’ಗಳಂತಹ ಹತ್ತಕ್ಕೂ ಹಲವು ಡ್ರೆಸಿನಾಗಳು ಒಳಾಂಗಣಕ್ಕೆ ಸೂಕ್ತವೆನಿಸಿವೆ. ಹೊರಾಂಗಣದ ತೀಕ್ಷ್ಣ ಬೆಳಕನ್ನೂ ತಾಳಬಲ್ಲ ಇವು ಒಳಾಂಗಣದ ನೆರಳನ್ನೂ ಸಹಿಸುತ್ತವೆ. ಲಕ್ಕಿ ಬ್ಯಾಂಬೂವಂತೂ ತೀರಾ ಕತ್ತಲಿರುವ ಮೂಲೆಯಲ್ಲಿಯೂ ಬದುಕಬಲ್ಲದು. ಒತ್ತೊತ್ತಾದ ಗೆಣ್ಣುಗಳು, ಗೆಣ್ಣುಗಳಿಂದ ಹೊರಟ ಮರಿ ಗೆಲ್ಲುಗಳು, ತುದಿಯಲ್ಲಿ ಹಕ್ಕಿ ಪುಕ್ಕದಂತೆ ಹರಡಿರುವ ಗುಂಪಾದ ಹಸುರು ಎಲೆಗಳು... ಡ್ರೆಸಿನಾಗಳದ್ದು ಅನುಪಮ ಅಂದ.

ನೀರು ಮತ್ತು ಮಣ್ಣು ಎರಡರಲ್ಲೂ ಬೆಳೆಯುವಂಥದ್ದು ಲಕ್ಕಿ ಬ್ಯಾಂಬೂ ಮತ್ತು ಇತರೆ ಡ್ರೆಸಿನಾಗಳ ವಿಶೇಷತೆ.



ಹೂಕುಂಡ ಮತ್ತು ಹೊರಾಂಗಣದ ಮಣ್ಣಿನಲ್ಲಿ ಇವು ಆರೆಂಟು ಅಡಿ, ಇನ್ನೂ ಎತ್ತರಕ್ಕೆ ಬೆಳೆದರೆ, ನೀರಿನಲ್ಲಿ ನಿಧಾನಕ್ಕೆ ಒಂದೆರಡು ಅಡಿ ಬೆಳೆಯುತ್ತಾ ಸಾಗುತ್ತವೆ. ತೀರಾ ತೀಕ್ಷ್ಣವಾದ ಬೆಳಕಲ್ಲಿ ಎಲೆಯ ತುದಿ ಸುಡುವ ಕಾರಣ ಇವುಗಳಿಗೆ ನೆರಳೇ ಹೆಚ್ಚು ಸೂಕ್ತ. ತೀರಾ ಕತ್ತಲಿನಲ್ಲಿ ಬಿಳುಚಿಕೊಳ್ಳುವ ಸಸ್ಯಗಳು ಆಕಾರ ಕೆಟ್ಟಂತಾಗಬಹುದು. ಹಾಗಾಗಿ ಹದವಾದ ನೆರಳು–ಬೆಳಕಿನ ಅಗತ್ಯವನ್ನು ಪೂರೈಸಬೇಕು.

ನೆರಳು–ಬೆಳಕಿನ ಸಮಸ್ಯೆಯಾದರೂ ಈ ಗಟ್ಟಿಜೀವಗಳನ್ನು ನೀರಿನಲ್ಲಿಯೇ ಇರಿಸಿ ಕಾಳಜಿ ಮಾಡಬಹುದು. ಹೀಗೆ ಮಾಡುವುದಾದಲ್ಲಿ ಬೇರು ಬಿಟ್ಟ ಕೊನೆಯ ಗೆಣ್ಣು ನೀರಿನಲ್ಲೇ ಇರುವಂತೆ ನೀರಿನ ಮಟ್ಟ ಕಾಪಾಡಿಕೊಳ್ಳಬೇಕು. ವಾರಕ್ಕೊಮ್ಮೆ ನೀರು ಬದಲಿಸಬೇಕು. ಕೆಲವೊಮ್ಮೆ ಆರೋಗ್ಯಕರವಾಗಿದ್ದ ದಂಟು ಇದ್ದಕ್ಕಿದ್ದಂತೇ ಹಳದಿಯಾಗಿ ಬುಡದಿಂದ ಕೊಳೆಯುವ ಸಮಸ್ಯೆ ಕಾಣಬಹುದು. ನೀರಿನಲ್ಲಿರುವ ಫ್ಲೋರೈಡ್ ಇತರೆ ಲವಣ–ಖನಿಜಗಳು ಅತಿಯಾದಲ್ಲಿ, ನೀರಿನಲ್ಲಿ ಹರಡುವ ಸೋಂಕಿನಿಂದ ಈ ಸಮಸ್ಯೆ ಉದ್ಭವಿಸಬಹುದು. ಹಳದಿ ದಂಟು ಕಂಡಿದ್ದೇ, ಅವುಗಳನ್ನು ಬೇರೆ ದಂಟಿನಿಂದ ಬೇರ್ಪಡಿಸಿ ನೀರನ್ನು ಬದಲಿಸಬೇಕು. ತಿರುಚು ಮುರುಚಾದ, ಸುರುಳಿಯಾದ, ಜಡೆಯಂತೆ ಹೆಣೆದ ವೈವಿಧ್ಯಮಯ ಆಕಾರದ ಲಕ್ಕಿ ಬ್ಯಾಂಬೂಗಳು ಇಂದು ಲಭ್ಯವಿವೆ. ಒಳಾಂಗಣ ಸಸ್ಯಗಳನ್ನು ಬೆಳೆಸುವತ್ತ ಆರಂಭಿಕರಾಗಿದ್ದಲ್ಲಿ ಲಕ್ಕಿ ಬ್ಯಾಂಬೂ ನಿಮ್ಮ ಮೊದಲ ಆಯ್ಕೆಯಾಗಿರಲಿ. ■



